


ಎಡದಿಂದ ಬಲಕ್ಕೆ

1. ಪ್ರಭಾವ ಬೀರಲು ಹೋಗಿ ಅಪಜಯವನ್ನು ಅನುಭವಿಸಿದನೇ? 4
3. ಭದ್ರವಾಗಿ ಇರಿಸಲೆಂದು ಕೊಟ್ಟಿದ್ದು ಅಗಲ ಬಾಯಿಯ ಪಾತ್ರೆ 3
4. ಖಂಜಿರ ನುಡಿಸುವುದನ್ನು ಕಲಿತಿದ್ದಾನೆ ಆ ಅಗಸ 3
6. ಈ ಪರಿಯ ಜಾನುವಾರುಗಳನ್ನು ಸಾಕಿ ಎಲ್ಲರಿಗೂ ಇಷ್ಟವಾದವನಾಗಿದ್ದಾನೆ 4
7. ಕಾಣಿಕೆ ಕೊಟ್ಟವರಿಗೆಲ್ಲ ನೀಡಿದ್ದು ಒಂದೊಂದು ಪೆನ್ನು 4
9. ಬಂಗಲೆಯನ್ನು ತಲುಪಲು ನಡೆದದ್ದು ಬೇಗ ಬೇಗ 4
12. ಕಾಡಿದ್ದನ್ನು ಸರಿಪಡಿಸಲು ನೀಡಿದ್ದು ಇಷ್ಟೆಲ್ಲ ಚಿಕ್ಕ ದೊಡ್ಡ ದುಡ್ಡು 4
14. ತಳ್ಳಿ ತಳ್ಳಿ ಸಾಕಾಯಿತೆಂದು ಹೀಗೆ ಮೆಟ್ಟಿ ಹಾಕುವುದೇ? 3
15. ಚದುರಿದವರನ್ನೆಲ್ಲ ಗುಂಪುಗೂಡಿಸಲು ಎಲ್ಲರಿಗೂ ಒಂದೊಂದು ಹೊದಿಕೆ 3
16. ಗನ್ನು ಹಿಡಿದವರ ನಡುವೆಯೇ ಒಬ್ಬ ವಿದೂಷಕನೂ ಇದ್ದಾನೆ 4

ಮೇಲಿನಿಂದ ಕೆಳಕ್ಕೆ

1. ಪ್ರಯಾಣದಲ್ಲಾದ ಪರಿಚಯದಿಂದ ನಡೆದದ್ದು ಈ ವಿವಾಹ 4
2. ಅವರವರ ಮಧ್ಯದಲ್ಲೇ ವಿನಿಮಯಗೊಂಡದ್ದು 'ಮದುಮಗನ ಹಾರ' 4
3. ಧೂಮಪಾನದ ಅಭ್ಯಾಸವಿದ್ದ ಎಲ್ಲರನ್ನೂ ತುಳಿದುಹಾಕಿದರೇ? 3
5. ಕಣ್ಣೀರಿಡುತ್ತಿದೆ ನೋಡಿ ಆ ಹೆಣ್ಣಾನೆ 3
6. ಶಿಖರಗಳನ್ನೆಲ್ಲ ಏರಿ ಗೆಲುವು ಪಡೆದವನು ಆತ 4
8. ಕುಳ್ಳಿರಿಸು ಎಂದದ್ದನ್ನು ಕೋಪಬರಿಸು ಎಂದು ಅರ್ಥಮಾಡಿಕೊಂಡ 3
10. ಗೊತ್ತಿರುವ ಜನರ ಚಹರೆ ಗೊತ್ತು ತಾನೇ? 3
11. ಅಳತೆ ಗೊತ್ತಿರುವವನ ಜೊತೆಗಷ್ಟೇ ಆತನ ಸ್ನೇಹ 4
12. ಎಲ್ಲರನ್ನೂ ದೋಚುವುದೆಂದರೆ ಕೆಟ್ಟ ನಡವಳಿಕೆ ತಾನೇ? 4
13. ತರಕಾರಿ ಕೊಂಡು ತರಲು ಏಕಿಷ್ಟು ಅವಸರ? 3

## 01—09—2022 ಉತ್ತರಗಳು

ಎಡದಿಂದ ಬಲಕ್ಕೆ

1. ಸ್ವಾಭಾವಿಕ 3. ನವಮಿ 4. ರಜಕ 6. ತ್ವರೆಮಾಡು 7. ಕರಬೂಜ 9. ಅಜಗಜ 11. ತಳಪಾಯ 13. ಧನುಷ್ಕೋಟಿ 15. ಕಾರಕೂನ 17. ಯತನ (=ಯತ್ನ) 18. ರಹಕು (ಕುಹರ ಹಿಂದುಮುಂದು) 19. ನರಲೋಕ

ಮೇಲಿನಿಂದ ಕೆಳಕ್ಕೆ

1. ಸ್ವಾಮಿತ್ವ 2. ಕರಡು 3. ನಶೀಬು 5. ಕಣಜ 7. ಕಲುಷಿತ 8. ಜಲಾಶಯ 9. ಅನುಬಂಧ 10. ಜಟಾಪಟಿ 12. ಪಾನೀಯ 14. ನುರುಕು 15. ಕಾನನ 16. ನರಕ

ಪ್ರಶ್ನಾಂಕಣ

# ದೆವ್ವದ ಬಂಗಾರ: ಅದೇನು?

ಧರೆಯಲ್ಲಿ ಲಭಿಸುವ ಅಲೋಹ ಧಾತು (Non Metal Element) ಗಳಲ್ಲೊಂದಾದ, ಬಹೂಪಯೋಗಿಯಾದ, ಹಾಗಾಗಿ ಎಲ್ಲರಿಗೂ ಪರಿಚಿತವಾದ ಗಂಧಕ (Sulphur) ಕ್ಕೇ ದೆವ್ವದ ಬಂಗಾರ (Devil's Gold) ಎಂಬ ಹೆಸರು ಕೂಡ. ಧರೆಯಲ್ಲಿ ದಾಸ್ತಾನಿರುವ ಅತ್ಯಂತ ಸಮೃದ್ಧ ಧಾತುಗಳ ಪಟ್ಟಿಯಲ್ಲಿ ಐದನೆಯ ಸ್ಥಾನದಲ್ಲಿರುವ ಆಕರ್ಷಕ ಹಳದಿ ಬಣ್ಣದ ಗಂಧಕ ಪೃಥ್ವಿಯಲ್ಲಿ ನಾನಾ ಸಂಯುಕ್ತಗಳ ರೂಪದಲ್ಲೂ, ಪರಿಶುದ್ಧ ಹರಳುಗಳ ರೂಪದಲ್ಲೂ (ಚಿತ್ರ2) ದೊರಕುತ್ತದೆ. ವಿಶೇಷವಾಗಿ ಜ್ವಾಲಾಮುಖಿಗಳ ಬಾಯಿಯ ಸುತ್ತಲೂ, ಬಾಯಿಯ ಒಳಗೆ ಕೈಗೆಟುಕುವಷ್ಟೇ ಆಳದಲ್ಲೂ, ಕೆಲವಾರು ಕುದಿ ಜಲದ ಕಾರಂಜಿಗಳ ಆಸುಪಾಸಿನಲ್ಲೂ (ಚಿತ್ರ1) ಶುದ್ಧ ಗಂಧಕ ಸುಲಭ ಲಭ್ಯ. ವಾಸ್ತವ ಏನೆಂದರೆ, ಗಾಢ ಕೆನೆ ಬಣ್ಣವೊಂದನ್ನು ಹೊರತುಪಡಿಸಿದರೆ ಗಂಧಕಕ್ಕೂ ಬಂಗಾರಕ್ಕೂ ಬೇರಾವ ಸಾಮ್ಯವೂ ಇಲ್ಲ; ಸಂಬಂಧವೂ ಇಲ್ಲ.

ಹಾಗಿದ್ದರೂ ಗಂಧಕಕ್ಕೆ 'ದೆವ್ವದ ಬಂಗಾರ' ಎಂಬ ಹೆಸರು ಬಂದಿರುವುದು ಏಕೆ?

ನಮ್ಮ ಪ್ರಪಂಚದ ಮೆಡಿಟರೇನಿಯನ್ ಮತ್ತು ಮಧ್ಯ ಪ್ರಾಚ್ಯದ ಭೂ ಪ್ರದೇಶಗಳಲ್ಲಿ ಹಲವಾರು ಜ್ವಾಲಾಮುಖಿ ನೆಲೆಗಳಿವೆ. ಆಗಾಗ ಹೊಗೆಯಾಡುವ ಈ ಅಗ್ನಿ ಪರ್ವತಗಳ ಬಾಯಿಂದ ಭೂ ಅಂತರಾಳದ ಕಡೆಗೆ ಸಾಗಿದ ಕೊನೆಗಾಣದ ಭಾರೀ ಕೊಳವೆ ರಂಧ್ರಗಳನ್ನು ಕಂಡು ಪ್ರಾಚೀನ ಕಾಲದ ಜನ ಆ ಜ್ವಾಲಾಮುಖಿಗಳನ್ನು 'ಪಾತಾಳ ಲೋಕದ ಹೆಬ್ಬಾಗಿಲುಗಳು' ಎಂದೇ ಭಾವಿಸಿದ್ದರು; ನಂಬಿದ್ದರು ಕೂಡ. ಧರೆಯಾಳದ ಗಂಧಕ ಅಲ್ಲಿನ ವಿಪರೀತ ಶಾಖದಿಂದ ಅನಿಲ ರೂಪ ತಳೆದು ಅಗ್ನಿಪರ್ವತಗಳ ಬಾಯಿಯಿಂದ ಹೊಗೆಯಂತೆ ಹೊರ ಹೊಮ್ಮುತ್ತವೆ; ಹೊರಗೆ ಬಂದ ನಂತರ ತಣ್ಣಗಾಗಿ ಮತ್ತೆ ಗಂಧಕವಾಗಿ ಪುಡಿ ರೂಪದಲ್ಲಿ ಉದುರಿ ಅಲ್ಲೇ ಶೇಖರಗೊಳ್ಳುತ್ತವೆ. ಹೀಗೆ ಹೊಮ್ಮುವ ಭಾರೀ ಬಿಸಿಯ ಗಂಧಕದ ಅನಿಲಗಳು ಇರುಳಲ್ಲಿ ನೀಲ ವರ್ಣದ ಜ್ವಾಲೆಗಳಂತೆ ಗೋಚರಿಸುತ್ತವೆ. ಪುರಾತನ ರೋಮನ್ನರಂತೂ ಇಂಥ ನೀಲಿ ಜ್ವಾಲೆಗಳ ಸನಿಹದ ಪ್ರದೇಶಗಳಲ್ಲೇ ದೆವ್ವಗಳು ನೆಲಸಿರುತ್ತವೆ ಎಂದು ನಂಬಿದ್ದರು.




ಹಾಗಾಗಿ ಕರಾಳ ಅಧೋಲೋಕದ ಹೆಬ್ಬಾಗಿಲುಗಳಾದ ಜ್ವಾಲಾಮುಖಿಗಳ ಬಾಯಿಯ ಬಳಿಯ ದೆವ್ವಗಳ ನೆಲೆಯಲ್ಲಿ ದೊರಕುವ ಬಂಗಾರ ಹಳದಿ ಬಣ್ಣದ ಗಂಧಕಕ್ಕೆ ಪುರಾತನ ಕಾಲದಿಂದಲೇ 'ದೆವ್ವದ ಬಂಗಾರ' ಎಂಬ ಹೆಸರು ಬಂದಿದೆ.

ಹಾಗೆಂದರೆ, ಗಂಧಕಕ್ಕೆ ಪ್ರಾಪ್ತವಾಗಿರುವ 'ದೆವ್ವದ ಬಂಗಾರ' ಎಂಬ ಪರ್ಯಾಯ ನಾಮಕ್ಕೆ ಮಿಥ್ಯಾ ಕಲ್ಪನೆಗಳು ಮತ್ತು ಮೂಢ ನಂಬಿಕೆಗಳೇ ಮೂಲ ಎಂಬುದು ಸ್ಪಷ್ಟವಾಯಿತಲ್ಲ?

■ ಎನ್. ವಾಸುದೇವ್